Notice, is therefore given to the Borrowers / Co-Borrowers, as mentioned herein above, calling upon them to make payment of the total outstanding amount as shown herein above, against the respective Borrower / Co-Borrower, within 60 days of publication of this notice. Failure to make payment of the total outstanding amount together with further interest by the respective Borrower/ Co-Borrower, MAHOFIN shall be constrained to take u/s 13(4) for enforcement of security interest upon properties as described above, steps are also being taken for service of notice in other manners as prescribed under the Act and the rules made hereunder. You are put to notice that the said mortgage can be redeemed upon payment of the entire amount due together with costs, charges and expenses incurred by MAHOFIN at any time before the date of publication of notice for public auction or private treaty for transfer by way of sale, as detailed in Section 13(8) of the SARFAESI Act.

Take note that in terms of S- 13 (13) of the SARFAESI Act, you are hereby restrained from transferring and/or dealing with the Secured Properties in any manner by way of sale, lease or in any other manner

Date : 14/03/2025 | Place : KARNATAKA **Sd/- Authorized Officer, Manappuram Home Finance Ltd**

ರೇಷ್ಮೆಗೂಡಿಗೆ ಈಗ ಬಂಗಾರದಂಥ ಬೆಲೆ

ಕೆ.ಜಿ ರೇಷ್ಮೆಗೂಡಿಗೆ ₹ 800ರ ಗಡಿ ತಲುಪಿದ ಬೆಲೆ | ಬಿಸಿಲ ಬೇಗೆಯಲ್ಲಿ ಕೃಷಿ ಮಾಡುವುದೇ ಸವಾಲು

■ ಕಣಿತಹಳ್ಳಿ ಎನ್.ಚಂದ್ರೇಗೌಡ
ಚಿಕ್ಕಬಳ್ಳಾಪುರ
chandregowda.n@timesofindia.com

ರೇಷ್ಮೆ ಕೃಷಿಗೆ ಈಗ ಸುಗ್ಗಿ ಕಾಲ. ಇತರೆ ಕೃಷಿ ಉತ್ಪನ್ನಗಳ ಬೆಲೆ ಇಳಿಮುಖವಾಗುತ್ತಿದ್ದರೆ ರೇಷ್ಮೆಗೂಡಿನ ಬೆಲೆ ಮಾತ್ರ ಏರಿಕೆಯಾಗುತ್ತಿದೆ. ಇದರಿಂದ ರೇಷ್ಮೆ ಬೆಳೆದವರಿಗೆ ಬಂಪರ್ ಲಾಭ ಬರುತ್ತಿದೆ. ಪ್ರತಿ ಕೆ.ಜಿ ರೇಷ್ಮೆಗೂಡು 700-800 ರೂ.ವರೆಗೂ ಮಾರಾಟವಾಗುತ್ತಿದೆ.

ಕೊರೊನಾ ಕಾಲದಲ್ಲಿ ರೇಷ್ಮೆಗೂಡಿಗೆ ಒಳ್ಳೆಯ ಬೆಲೆ ಇತ್ತು. ಪ್ರತಿ ಕೆ.ಜಿ ರೇಷ್ಮೆಗೂಡು 1000 ರೂ.ಗೆ ಮಾರಾಟವಾದ ದಾಖಲೆ ಇತ್ತು. ಆನಂತರ ಹೇಳಿಕೊಳ್ಳುವಂತಹ ಬೆಲೆ ಇರಲಿಲ್ಲ, ಆದರೆ ಕಳೆದ ಐದಾರು ತಿಂಗಳಿಂದ ಪ್ರತಿ ಕೆ.ಜಿಗೆ 500ರಿಂದ 600 ರೂ.ವರೆಗೂ ಬೆಲೆ ಬಂದಿತ್ತು. ಕಳೆದ ಒಂದು ತಿಂಗಳಿಂದ ರೇಷ್ಮೆಗೂಡಿನ ಬೆಲೆ ಗರಿಷ್ಠ 800 ರೂ.ವರೆಗೂ ಏರಿಕೆಯಾಗಿದೆ.

ಬೆಲೆ ಏರಿಕೆ ಏಕೆ?: ಸದ್ಯ ಮಾರುಕಟ್ಟೆಯಲ್ಲಿ ಪ್ರತಿ ಕೆಜಿ ರೇಷ್ಮೆಗೂಡಿಗೆ ಸರಾಸರಿ 650-700 ಹಾಗೂ ಗರಿಷ್ಠ 750ರಿಂದ 800 ರೂ.ವರೆಗೂ ಇದೆ. ಮಾರುಕಟ್ಟೆಗೆ ಬರುತ್ತಿರುವ ರೇಷ್ಮೆಗೂಡಿನ ಪ್ರಮಾಣವೂ ಕಡಿಮೆಯಾಗಿದೆ. ಇನ್ನೊಂದೆಡೆ ಕಚ್ಚಾ ರೇಷ್ಮೆ ಬೆಲೆಯೂ ಏರಿಕೆಯಾಗಿರುವುದರಿಂದ ರೇಷ್ಮೆಗೂಡಿಗೆ ಬೇಡಿಕೆ ಬಂದಿದೆ. ಹೀಗಾಗಿ ಮಾರುಕಟ್ಟೆಯಲ್ಲಿ ರೇಷ್ಮೆಗೂಡಿಗೆ ಒಳ್ಳೆಯ ಬೆಲೆ ಸಿಗುತ್ತಿದೆ. ಇದು ಇನ್ನಷ್ಟು ಹೆಚ್ಚಾಗುವ ಸಾಧ್ಯತೆಯೂ ಇದೆ.

ಬಿರು ಬಿಸಿಲಿನ ಹೊಡೆತ: ರೇಷ್ಮೆಗೂಡಿಗೆ ಒಳ್ಳೆಯ ಬೆಲೆ ಇದೆಯಾದರೂ ಬಿರು ಬಿಸಿಲಿನಿಂದ ರೇಷ್ಮೆ ಬೆಳೆ ಬೆಳೆಯುವುದು ಬಲು ಕಷ್ಟ. ಹೆಚ್ಚಿನ ಇಳುವರಿಯೂ ಬಾರದ ಕಾರಣ ಮಾರುಕಟ್ಟೆಗೆ ಹೆಚ್ಚಿನ ರೇಷ್ಮೆಗೂಡು ಬರುತ್ತಿಲ್ಲ. ಗೂಡಿನ ಕೊರತೆಯಿಂದಲೇ ಕಚ್ಚಾ ರೇಷ್ಮೆ ಬೇಡಿಕೆಗೆ ತಕ್ಕಂತೆ ಸಿಗುತ್ತಿಲ್ಲ. ಹೀಗಾಗಿ ಮಾರುಕಟ್ಟೆಗೆ ಹೆಚ್ಚಿನ ರೇಷ್ಮೆಗೂಡು ಬಾರದ ಕಾರಣ ದಿನೇ ದಿನೆ ಬೆಲೆ ಏರಿಕೆಯಾಗುತ್ತಿದೆ.

ಸೊಪ್ಪಿಗೂ ರೋಗ: ಮತ್ತೊಂದೆಡೆ ಹಿಪ್ಪುನೇರಳೆಸೊಪ್ಪು ಭಾರಿ ಸೂಕ್ಷ್ಮವಾಗಿರುವುದರಿಂದ ನಾನಾ ರೋಗಗಳ ಹಾವಳಿ ಹೆಚ್ಚಾಗಿದೆ. ನೀರಿನ ಕೊರತೆಯಿಂದ ಸೊಪ್ಪನ್ನು ಬೆಳೆಯುವುದೇ ಕಷ್ಟ ಎನ್ನುವಂತಾಗಿದೆ. ಸೊಪ್ಪಿನ ಕೊರತೆಯೂ ಹೆಚ್ಚಿರುವುದರಿಂದ ಬೆಲೆಯೂ ದುಬಾರಿಯಾಗಿದೆ. ಇನ್ನೊಂದೆಡೆ ರೇಷ್ಮೆಹುಳುಗಳಿಗೂ ನಾನಾ ರೋಗಗಳು ಬಾಧಿಸುತ್ತಿವೆ. ರೇಷ್ಮೆಗೂಡಿನ ಬೆಲೆ ಹೆಚ್ಚಾಗಿದ್ದರೂ ಬೆಳೆ ಬೆಳೆಯುವುದೇ ಕಷ್ಟ ಎನ್ನುವಂತಾಗಿದೆ.

ತೋಟಗಾರಿಕೆ ಬೆಳೆಗಳ ಆರ್ಭಟದಲ್ಲಿ ರೇಷ್ಮೆ ಕೃಷಿಯ ವಿಸ್ತೀರ್ಣವೂ ದಿನೇ ದಿನೆ ಕಡಿಮೆಯಾಗುತ್ತಿದೆ. ಹಿಪ್ಪುನೇರಳೆ ಸೊಪ್ಪು ಬೆಳೆಯುವವರ ಸಂಖ್ಯೆ ಕಡಿಮೆಯಾಗುತ್ತಿದ್ದು ರೇಷ್ಮೆಗೂಡಿನ ಬೆಲೆ ಏರಿಕೆಯಾಗುತ್ತಿದೆ. ಹೀಗಾಗಿ ತೋಟಗಾರಿಕೆ ಬೆಳೆಗಳ ಕಡೆ ಮುಖ ಮಾಡಿದ್ದ ರೈತರು ಈಗ ಮತ್ತೊಮ್ಮೆ ರೇಷ್ಮೆ ಕೃಷಿಯತ್ತ ಚಿತ್ತ ಹರಿಸುವಂತಾಗಿದೆ.

ರೇಷ್ಮೆಗೆ ಈಗ ಬಂಪರ್ ಬೆಲೆ ಬಂದಿದೆ. ಹವಾಮಾನ ವೈಪರೀತ್ಯದಿಂದ ನಿರೀಕ್ಷಿತ ಇಳುವರಿ ಬರುತ್ತಿಲ್ಲ. ಆದರೆ ಒಳ್ಳೆಯ ಬೆಲೆ ಇರುವುದರಿಂದ ಸದ್ಯಕ್ಕೆ ರೇಷ್ಮೆ ಕೃಷಿಯೊಂದೇ ಲಾಭದಾಯಕವಾಗಿದೆ. ತೋಟಗಾರಿಕೆ ಬೆಳೆಗಳ ಕಡೆ ಮನಸ್ಸು ಮಾಡಿದ್ದವರೂ ಈಗ ಮತ್ತೆ ರೇಷ್ಮೆ ಕೃಷಿಯತ್ತ ವಾಲುವಂತಾಗಿದೆ.

- **ಮಂಜುನಾಥ್** ರೇಷ್ಮೆ ಕೃಷಿಕರು

ಮಾರುಕಟ್ಟೆಯಲ್ಲಿ ಕಚ್ಚಾ ರೇಷ್ಮೆ ಬೆಲೆ ಹೆಚ್ಚಾಗಿದೆ. ಅಲ್ಲದೇ ವಾತಾವರಣ ಕಾರಣದಿಂದ ರೇಷ್ಮೆಗೂಡಿನ ಇಳುವರಿಯೂ ಕಡಿಮೆಯಾಗಿದೆ. ಹೀಗಾಗಿ ಮಾರುಕಟ್ಟೆಯಲ್ಲಿ ಕಳೆದ ಐದಾರು ತಿಂಗಳಿಂದಲೂ ಬೆಲೆ ಚೆನ್ನಾಗಿಯೇ ಇದೆ. ಕಳೆದ ಒಂದು ತಿಂಗಳಿಂದ ಮತ್ತಷ್ಟು ಹೆಚ್ಚಾಗಿದೆ.

- **ಬೋಜಣ್ಣ** ಉಪ ನಿರ್ದೇಶಕ, ರೇಷ್ಮೆ ಇಲಾಖೆ, ಚಿಕ್ಕಬಳ್ಳಾಪುರ

2035ರ ವೇಳೆಗೆ ದೇಶದಲ್ಲಿ 10 ಲಕ್ಷ ನವೋದ್ಯಮ

- ನಂದನ್ ನಿಲೇಕಣಿ ವಿಶ್ವಾಸ
- ಸಣ್ಣ ನಗರಗಳಿಗೂ ವ್ಯಾಪಿಸುತ್ತಿದೆ ಸ್ಟಾರ್ಟಪ್‌ಗಳ ವ್ಯಾಪ್ತಿ

ಬೆಂಗಳೂರು: ಭಾರತವು 2035ರ ವೇಳೆಗೆ 10 ಲಕ್ಷ ಸ್ಟಾರ್ಟಪ್‌ಗಳಿಗೆ ನೆಲೆಯಾಗಲಿದೆ ಎಂದು ಇನ್ಫೋಸಿಸ್ ಸಹ ಸಂಸ್ಥಾಪಕ ನಂದನ್ ನಿಲೇಕಣಿ ಭವಿಷ್ಯ ನುಡಿದಿದ್ದಾರೆ.

ಬೆಂಗಳೂರಿನಲ್ಲಿ ಕಾರ್ಯಕ್ರಮವೊಂದರಲ್ಲಿ ಮಾತನಾಡಿದ ಅವರು, ''ಈಗ ದೇಶದಲ್ಲಿ ಸುಮಾರು 1,50,000 ನವೋದ್ಯಮ ಗಳಿವೆ. ಸ್ಟಾರ್ಟಪ್‌ಗಳ ಬೆಳವಣಿಗೆ ದರ ಶೇ.20ರಷ್ಟಿದೆ. ಇದೇ ಪ್ರಮಾಣದ ಬೆಳವಣಿಗೆ ದರ ಮುಂದುವರಿದರೆ ಇನ್ನು ಹತ್ತು ವರ್ಷದಲ್ಲಿ ಹತ್ತು ಲಕ್ಷ ಸ್ಟಾರ್ಟಪ್‌ಗಳು ದೇಶದಲ್ಲಿ ಆರಂಭವಾಗುವುದು ಖಚಿತ,'' ಎಂದು ವಿಶ್ವಾಸ ವ್ಯಕ್ತಪಡಿಸಿದರು.

''100 ಕೋಟಿ ರೂ. ಮೂಲ ಬಂಡವಾಳದೊಂದಿಗೆ ಕಾರ್ಯಾಚರಣೆ ನಡೆಸುತ್ತಿದ್ದ ಯೂನಿಕಾರ್ನ್‌ಗಳು ಮಂಕಾಗಿವೆ. ಈಗ ಐಪಿಒ ಬೂಮ್ ಆಗುತ್ತಿದೆ. ಹೂಡಿಕೆ ಸಂಚಲನೆಗಳ ದಿಕ್ಕು ಬದಲಾಗಿದೆ. ಇಡೀ ವಿಶ್ವದಲ್ಲೇ ಬಿಎಸ್‌ಇ ಸೆನ್ಸೆಕ್ಸ್ ಪಟ್ಟಿಗೆ ಸೇರಬೇಕು ಎಂಬ ಹಂಬಲ ಸ್ಟಾರ್ಟಪ್‌ಗಳಲ್ಲಿ ಹೆಚ್ಚುತ್ತಿದೆ,'' ಎಂದು ಅಭಿಪ್ರಾಯಪಟ್ಟರು.

''ತಂತ್ರಜ್ಞಾನ, ಬಂಡವಾಳ, ಉದ್ಯಮಶೀಲತೆ 8 ಲಕ್ಷ ಕೋಟಿ ಡಾಲರ್ ಆರ್ಥಿಕತೆಯತ್ತ ಸಾಗಿಸಲು ಪ್ರಮುಖ ಚಾಲಕ ಶಕ್ತಿಗಳಾಗಿವೆ. ಈ ಸನ್ನಿವೇಶದಲ್ಲಿ ನವೋದ್ಯಮಗಳ ಬೆಳವಣಿಗೆ ಗಮನ ಸೆಳೆಯುತ್ತದೆ. ಐಪಿಒ ಅಲೆ ಗಮನಿಸಿದಾಗ ಕೂಡ ನವೋದ್ಯಮಗಳ ಬೆಳವಣಿಗೆ ಗೊತ್ತಾಗುತ್ತದೆ. ಒಟ್ಟು ಐಪಿಒಗಳಲ್ಲಿ ನವೋದ್ಯಮಗಳದ್ದು ಹೆಚ್ಚಿನ ಪಾಲು ಇದೆ. ಈ ಪ್ರವೃತ್ತಿಯು ಭಾರತದ ಆರ್ಥಿಕ ಮತ್ತು ಉದ್ಯಮಶೀಲ ಪರಿಸರ ವ್ಯವಸ್ಥೆಯಲ್ಲಿ ಆಳವಾದ ಬದಲಾವಣೆಯನ್ನು ಸೂಚಿಸುತ್ತದೆ. ಅಲ್ಲಿ ಯಶಸ್ವಿನ ಕಥೆಗಳು ಹೊಸ ಆಲೋಚನೆಗಳು, ನಾವೀನ್ಯತೆ ಮತ್ತು ಬಂಡವಾಳದ ಹರಿವನ್ನು ಪಡೆಯುತ್ತವೆ,'' ಎಂದು ವಿವರಿಸಿದರು.

ಭಾರತೀಯ ಕಂಪನಿಗಳ ಘರ್ ವಾಪ್ಸಿ: ''ಭಾರತೀಯ ಮೂಲದ ಸ್ಟಾರ್ಟಪ್‌ಗಳು ಆರಂಭದಲ್ಲಿ ಸಿಂಗಾಪುರ ಅಥವಾ ಅಮೆರಿಕದ ಕೆಲ ಕಂಪನಿಗಳ ಜತೆ ನಂಟು ಬೆಸೆದುಕೊಂಡಿದ್ದವು. ಈಗ ತವರಿಗೆ ಮರಳುತ್ತಿವೆ. ಇದಕ್ಕೆ ನೀತಿ ಬದಲಾವಣೆ, ಮಾರುಕಟ್ಟೆ ಪರಿಸ್ಥಿತಿ ಮತ್ತು ಭಾರತದ ಆರ್ಥಿಕ ಸ್ಥಿರತೆ ಕಾರಣವಾಗಿದೆ. ಈ ಘರ್ ವಾಪ್ಸಿ ಕೇವಲ ಸಾಂಕೇತಿಕ ಮಾತ್ರವಲ್ಲ, ಆರ್ಥಿಕವಾಗಿಯೂ ಮಹತ್ವದ್ದಾಗಿದೆ. ಅಲ್ಲಿಂದ ಬಂದ ಕಂಪನಿಗಳು ಈಗ ಭಾರತದಲ್ಲಿ ತೆರಿಗೆ ಪಾವತಿಸುತ್ತಿವೆ, ಉದ್ಯೋಗಗಳನ್ನು ಸೃಷ್ಟಿಸುತ್ತಿವೆ ಮತ್ತು ಷೇರುಪೇಟೆಗಳನ್ನು ಬಲ ಪಡಿಸುತ್ತಿವೆ. ಈಗಾಗಲೇ ಜಾಗತಿಕವಾಗಿ ಅತಿ ಹೆಚ್ಚು ಐಪಿಒಗಳನ್ನು ಹೊಂದಿರುವ ಭಾರತ 2035ರ ವೇಳೆಗೆ ವಿಶ್ವದ ಅಗ್ರ ಐಪಿಒ ತಾಣವಾಗಲು ಸಜ್ಜಾಗಿದೆ,'' ಎಂದು ಅವರು ವಿಶ್ಲೇಷಿಸಿದರು.

''ಈ ಹಿಂದೆ ನವೋದ್ಯಮಗಳು ಬೆಂಗಳೂರು, ದಿಲ್ಲಿ ಹಾಗೂ ಮುಂಬಯಿಗಳಲ್ಲಿ ಹೆಚ್ಚಿದ್ದವು. ಈಗ ಸಣ್ಣ ನಗರ ಮತ್ತು ಪಟ್ಟಣಗಳಲ್ಲಿ ಹೆಚ್ಚು ಸ್ಥಾಪಿತವಾಗುತ್ತಿವೆ. ಪಂಜಾಬ್‌ನ ಅಗ್ರಿಟೆಕ್ ಉದ್ಯಮಗಳಿಂದ ಹಿಡಿದು ಬಿಹಾರದ ಹೆಲ್ತ್ ಟೆಕ್ ಸಲ್ಯೂಷನ್ಸ್ ತನಕ ಇವುಗಳ ವ್ಯಾಪ್ತಿ ಇದೆ. ಶ್ರೇಣಿ -2 ಮತ್ತು ಶ್ರೇಣಿ -3 ನಗರಗಳಿಗೆ ಹೊಸ ಅವಕಾಶಗಳನ್ನು ತೆರೆಯುತ್ತಿವೆ. ಭಾರತದ ಆರ್ಥಿಕ ಬೆಳವಣಿಗೆಗೆ ಈಗ ಎಲ್ಲರನ್ನೂ ಒಳಗೊಳ್ಳುತ್ತಿದೆ,'' ಎಂದು ನಂದನ್ ನಿಲೇಕಣಿ ಶ್ಲಾಘಿಸಿದರು.

ಮತ್ತೆ ಏರಿದ ಚಿನ್ನ, ಬೆಳ್ಳಿ ಬೆಲೆ

ಹೊಸದಿಲ್ಲಿ: ರಾಷ್ಟ್ರ ರಾಜಧಾನಿಯ ಚಿನಿವಾರ ಪೇಟೆಯಲ್ಲಿ ಗುರುವಾರ ಚಿನ್ನ ಮತ್ತು ಬೆಳ್ಳಿ ಧಾರಣೆ ಏರಿದೆ. ಜಾಗತಿಕ ಮಾರುಕಟ್ಟೆಯಲ್ಲಿ ಹೂಡಿಕೆದಾರರಿಂದ ಚಿನ್ನದ ಖರೀದಿಯು ಹೆಚ್ಚಳವಾಗಿದೆ. ಇದರಿಂದ ದರ ಏರಿಕೆಯಾಗಿದೆ. ದೇಶೀಯ ಮಾರುಕಟ್ಟೆ ಮೇಲೂ ಇದು ಪರಿಣಾಮ ಬೀರಿದೆ ಎಂದು ಮಾರುಕಟ್ಟೆ ತಜ್ಞರು ತಿಳಿಸಿದ್ದಾರೆ. 10 ಗ್ರಾಂ ಶುದ್ಧ ಚಿನ್ನದ ಬೆಲೆ 600 ರೂ. ಹೆಚ್ಚಳವಾಗಿ 89,450 ರೂ.ಗೆ ಮಾರಾಟವಾಗಿದೆ. ಆಭರಣ ಚಿನ್ನದ ದರ ಇಷ್ಟೇ ಪ್ರಮಾಣದಲ್ಲಿ ಏರಿಕೆಯಾಗಿ 89,050 ರೂ. ಆಗಿದೆ.

ಬೆಳ್ಳಿ ಧಾರಣೆಯು ಕೆ.ಜಿಗೆ 1 ಸಾವಿರ ರೂ. ಜಿಗಿದು 1.01 ಲಕ್ಷ ರೂ. ದಾಟಿದೆ. ಜಾಗತಿಕ ಮಾರುಕಟ್ಟೆಯಲ್ಲೂ ಚಿನ್ನದ ಬೆಲೆ ಏರುಮುಖಿಯಾಗಿದೆ. ಅಮೆರಿಕದಲ್ಲಿ ಸಗಟು ಹಣದುಬ್ಬರವು ಇಳಿಕೆಯಾಗಿದೆ. ಇದರಿಂದ ಅಲ್ಲಿನ ಕೇಂದ್ರೀಯ ಬ್ಯಾಂಕ್ ಆದ ಫೆಡರಲ್ ರಿಸರ್ವ್ ಈ ವರ್ಷವೂ ಬಡ್ಡಿದರ ಕಡಿತಗೊಳಿಸುವ ಸಾಧ್ಯತೆ ಬಗ್ಗೆ ಭರವಸೆ ಮೂಡಿದೆ. ಇದರಿಂದ ಹೂಡಿಕೆದಾರರು ಬಂಗಾರ ಖರೀದಿಗೆ ಮುಂದಾಗಿದ್ದಾರೆ. ಇದರಿಂದ ಚಿನ್ನದ ದರ ಏರಿಕೆಯಾಗಿದೆ,'' ಎಂದು ಹಿರಿಯ ಮಾರುಕಟ್ಟೆ ವಿಶ್ಲೇಷಕ ಸೌಮಿಲ್ ಗಾಂಧಿ ಹೇಳಿದ್ದಾರೆ.

ಬೆಂಗಳೂರಿನಲ್ಲಿ 600 ರೂ. ಜಂಪ್: ಬೆಂಗಳೂರಿನಲ್ಲಿ 24 ಕ್ಯಾರೆಟ್‌ನ 10 ಗ್ರಾಂ ಚಿನ್ನದ ಬೆಲೆಯಲ್ಲಿ 600 ರೂ. ಏರಿಕೆಯಾಗಿ 88,580 ರೂ.ಗೆ ಮಾರಾಟವಾಗಿದೆ. ಇಷ್ಟೇ ತೂಕದ 22 ಕ್ಯಾರೆಟ್ ಚಿನ್ನದ ಬೆಲೆಯಲ್ಲಿ 550 ರೂ. ಹೆಚ್ಚಾಗಿ, 81,200 ರೂ. ಆಗಿದೆ. ಬೆಳ್ಳಿ ಬೆಲೆ ಕೆ.ಜಿಗೆ 1 ಸಾವಿರ ರೂ. ಏರಿಕೆಯಾಗಿ 1,01,000 ರೂ. ಆಗಿದೆ.



ಮೇಲೇಳದ ಷೇರುಪೇಟೆ

ಮುಂಬಯಿ: ಸತತ ಐದನೇ ದಿನವೂ ಷೇರುಪೇಟೆ ಇಳಿಕೆಯನ್ನೇ ಕಂಡಿತು. ಮುಂಬಯಿ ಷೇರುಪೇಟೆ ಸೂಚ್ಯಂಕ 'ಸೆನ್ಸೆಕ್ಸ್' 200.85 ಅಂಕ ಇಳಿಕೆಯಾಗಿ 73,828.91ರಲ್ಲಿ ವಹಿವಾಟು ಕೊನೆಗೊಂಡಿತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ 'ನಿಫ್ಟಿ' 73.30 ಅಂಕ ಕುಸಿದು, 22,397.20ರಲ್ಲಿ ಸ್ಥಿರಗೊಂಡಿತು.

ಬೆಂಬಲ ಬೆಲೆ ಮೂಲಕ 1.31 ಲಕ್ಷ ಟನ್ ತೊಗರಿ ಖರೀದಿ

ಹೊಸದಿಲ್ಲಿ: ಧಾರಣೆ ಕುಸಿತದಿಂದ ಸಂಕಷ್ಟಕ್ಕೆ ಸಿಲುಕಿರುವ ರೈತರನ್ನು ಕಾಪಾಡಲು ಬೆಲೆ ಬೆಂಬಲ ಯೋಜನೆಯಡಿ (ಪಿಎಸ್‌ಎಸ್) ತೊಗರಿ ಖರೀದಿಗೆ ಚಾಲನೆ ನೀಡಲಾಗಿದೆ. ಇಲ್ಲಿಯವರೆಗೆ 1.31 ಲಕ್ಷ ಟನ್ ಖರೀದಿ ಸಲಾಗಿದೆ. ಒಟ್ಟು 89,219 ರೈತರು ಪ್ರಯೋಜನ ಪಡೆದಿದ್ದಾರೆ ಎಂದು ಕೇಂದ್ರ ಕೃಷಿ ಸಚಿವಾಲಯ ಗುರುವಾರ ತಿಳಿಸಿದೆ.

''2024-25ನೇ ಮುಂಗಾರು ಋತುವಿನಲ್ಲಿ ಕರ್ನಾಟಕ, ಆಂಧ್ರಪ್ರದೇಶ, ಛತ್ತೀಸಗಢ, ಗುಜರಾತ್, ಹರಿಯಾಣ, ಮಧ್ಯಪ್ರದೇಶ, ಮಹಾರಾಷ್ಟ್ರ, ತೆಲಂಗಾಣ ಮತ್ತು ಉತ್ತರಪ್ರದೇಶದಲ್ಲಿ ಖರೀದಿಗೆ ಅನುಮತಿ ನೀಡಲಾಗಿದೆ. ಈಗಾಗಲೇ ಆಂಧ್ರಪ್ರದೇಶ, ಗುಜರಾತ್, ಕರ್ನಾಟಕ, ಮಹಾರಾಷ್ಟ್ರ ಮತ್ತು ತೆಲಂಗಾಣದಲ್ಲಿ ಖರೀದಿ ಚಾಲನೆ ನೀಡಲಾಗಿದೆ. ಶೀಘ್ರದಲ್ಲೇ ಉಳಿದ ರಾಜ್ಯಗಳಲ್ಲೂ ಖರೀದಿ ಪ್ರಕ್ರಿಯೆ ಆರಂಭಿಸಲಾಗುವುದು,'' ಎಂದು ಸಚಿವಾಲಯ ತಿಳಿಸಿದೆ.

ನಾಫೆಡ್ ಮತ್ತು ಎನ್‌ಸಿಸಿಎಫ್‌ನ ಇ- ಸಮೃದ್ಧಿ ಪೋರ್ಟಲ್ ಅಡಿ ನೋಂದಣಿ ಮಾಡಿದ ರೈತರಿಂದಲೂ ತೊಗರಿ ಖರೀದಿಸಲಾಗುತ್ತಿದೆ. ಮುಕ್ತ ಮಾರು ಕಟ್ಟೆಯಲ್ಲಿ ಕನಿಷ್ಠ ಬೆಂಬಲ ಬೆಲೆಗಿಂತ (ಎಂಎಸ್‌ಪಿ) ಕಡಿಮೆ ದರದಲ್ಲಿ ಮಾರಾಟವಾಗುತ್ತಿದ್ದರೆ ಬೆಲೆ ಬೆಂಬಲ ಯೋಜನೆಯಡಿ ಕೃಷಿ ಹುಟ್ಟುವಳಿಗಳನ್ನು ಖರೀದಿಸಲಾಗುತ್ತದೆ ಎಂದು ಹೇಳಿದೆ. ದೇಶದಲ್ಲಿ ದ್ವಿದಳ ಧಾನ್ಯಗಳ ಉತ್ಪಾದನೆ ಹೆಚ್ಚಿಸಲು ಕೇಂದ್ರ ಸರಕಾರ ಆತ್ಮನಿರ್ಭರ ಮಿಷನ್ ಅನ್ನು 2028-29ರ ವರೆಗೂ ವಿಸ್ತರಿಸಿದೆ.

ಮೈಸೂರು ರೇಷ್ಮೆ ಸೀರೆಗೆ ಮುಗಿಬಿದ್ದ ಮಹಿಳೆಯರು

ಮೈಸೂರು: ಯುಗಾದಿ ಹಬ್ಬದ ಹಿನ್ನೆಲೆಯಲ್ಲಿ ಕರ್ನಾಟಕ ರೇಷ್ಮೆ ಉದ್ಯಮ ನಿಗಮ (ಕೆಎಸ್‌ಐಸಿ) ಗುರುವಾರ ಆರಂಭಿಸಿದ ರಿಯಾಯಿತಿ ದರದ ಮೈಸೂರು ರೇಷ್ಮೆ ಸೀರೆ ಕೊಳ್ಳಲು ಮಹಿಳೆಯರು ಮುಗಿಬಿದ್ದರು. ಮುನ್ನೆಚ್ಚರಿಕೆ ಕ್ರಮವಾಗಿ ಪೊಲೀಸರು ಬ್ಯಾರಿಕೇಡ್ ಅಳವಡಿಸಿದ್ದಾರೆ.

ಮಾನಂದವಾಡಿ ರಸ್ತೆಯಲ್ಲಿರುವ ರೇಷ್ಮೆ ನೇಯ್ಗೆ ಕಾರ್ಖಾನೆ ಆವರಣದಲ್ಲಿರುವ ಶತಮಾನೋತ್ಸವ ಭವನದಲ್ಲಿ ಶೇ.25ರಷ್ಟು ರಿಯಾಯಿತಿ ದರದಲ್ಲಿ ರೇಷ್ಮೆ ಸೀರೆ ಮಾರಲಾಗುತ್ತಿದೆ. ಸೀರೆ ಕೊಳ್ಳಲು ಮಹಿಳೆಯರು ಮುಂಜಾನೆಯಿಂದಲೇ ಸರದಿ ಸಾಲಿನಲ್ಲಿ ನಿಂತರು.

ಕೆಪಿಎಸ್‌ಸಿ ಅಭ್ಯರ್ಥಿಗಳಿಗೆ ಶಾಸಕ ಪ್ರದೀಪ್ ಬೆಂಬಲ

■ ವಿಕ ಸುದ್ದಿಲೋಕ ಬೆಂಗಳೂರು

''ಕೆಪಿಎಸ್‌ಸಿ ಪರೀಕ್ಷೆ ಬರೆದಿರುವ ಅಭ್ಯರ್ಥಿಗಳು ಸರಕಾರಕ್ಕೆ ಕೆಲವು ಬೇಡಿಕೆಗಳನ್ನು ಸಲ್ಲಿಸಿದ್ದಾರೆ. ಅವುಗಳಿಗೆ ನನ್ನ ಬೆಂಬಲವಿದೆ. ನಾನು ವೈಯಕ್ತಿಕವಾಗಿ ಹಾಗೂ ಸರಕಾರದ ಭಾಗವಾಗಿ, ಒಬ್ಬ ಶಿಕ್ಷಕನಾಗಿ ಕೆಪಿಎಸ್‌ಸಿ ವಿದ್ಯಾರ್ಥಿಗಳ ಪರವಾಗಿ ಮುಖ್ಯಮಂತ್ರಿಗಳಿಗೆ ಮತ್ತು ಸರಕಾರಕ್ಕೆ ಬೇಡಿಕೆಗಳನ್ನು ಸಲ್ಲಿಸುತ್ತೇನೆ. ಕೆಪಿಎಸ್‌ಸಿಯಲ್ಲಿ ಸುಧಾರಣೆ ತರಲು ಶ್ರಮಿಸುವೆ,'' ಚಿಕ್ಕಬಳ್ಳಾಪುರ ಶಾಸಕ ಪ್ರದೀಪ್ ಈಶ್ವರ್ ಹೇಳಿದರು. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ''ಕೆಪಿಎಸ್‌ಸಿ ಪರೀಕ್ಷಾ ಪ್ರಕ್ರಿಯೆಯಲ್ಲಿ ತಕ್ಷಣ ಸುಧಾರಣೆಗಳನ್ನು ತರಬೇಕು, ಯುಪಿಎಸ್‌ಸಿ ಮಾದರಿಯಂತೆ ಕೆಪಿಎಸ್‌ಸಿ ಕಾರ್ಯ ನಿರ್ವಹಿಸಬೇಕು. ಪ್ರತಿ ವರ್ಷ ಪರೀಕ್ಷಾ ಕ್ಯಾಲೆಂಡ್ ಪ್ರಕಟಿಸಬೇಕು,'' ಎಂದರು.

''ಈಗ 4 ವರ್ಷಕ್ಕೊಮ್ಮೆ ಕೆಎಎಸ್ ಪರೀಕ್ಷೆಗಳು ನಡೆಯುತ್ತಿವೆ. ಇದರಿಂದ ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತಿದೆ. ಹೀಗಾಗಿ ವರ್ಷದಲ್ಲಿ ಒಂದು ಬಾರಿ ಪರೀಕ್ಷೆ ನಡೆಸಿದರೆ ಪ್ರಸಕ್ತ ವಿದ್ಯಮಾನಗಳ ಅಧ್ಯಯನಕ್ಕೆ ಹೆಚ್ಚು ಅನುಕೂಲ. ಯುಪಿಎಸ್‌ಸಿ ಪ್ರಿಲಿಮ್ಸ್ ಪರೀಕ್ಷಾ ಫಲಿತಾಂಶವನ್ನು 15 ದಿನಗಳಲ್ಲಿ ಪ್ರಕಟಿಸುತ್ತದೆ. ಕೆಪಿಎಸ್‌ಸಿಗೂ ಇದೇ ಕಾರ್ಯಸೂಚಿ ಇರಬೇಕು.

ಪ್ರಿಲಿಮ್ಸ್, ಮೇನ್ಸ್ ಹಾಗೂ ವೈವಾ- ಈ ಎಲ್ಲ ಹಂತಗಳನ್ನು 10 ತಿಂಗಳಲ್ಲಿ ಪೂರ್ಣಗೊಳಿಸಬೇಕು,'' ಎಂದು ಒತ್ತಾಯಿಸಿದರು. ''ಪ್ರಶ್ನೆಪತ್ರಿಕೆ ಅನುವಾದ ಈಗ ತುಂಬ ಕಳಪೆಯಾಗಿದೆ. ಈ ಕೊರತೆ ನೀಗಲು ಭಾಷಾ ತಜ್ಞರ ನೆರವು ಪಡೆಯುವುದು ಅಗತ್ಯ,'' ಎಂದು ಅವರು ಒತ್ತಿ ಹೇಳಿದರು.

ಹೂಡಿಕೆಗೆ ನೆದರ್ಲೆಂಡ್ಸ್ ಆಸಕ್ತಿ, ಎಂಬಿಪಿ ಜತೆಗೆ ಕಾನ್ಸುಲ್ ಜನರಲ್ ಚರ್ಚೆ

ಬೆಂಗಳೂರು: ರಾಜ್ಯದಲ್ಲಿ ಕೈಗಾರಿಕೆ ಮತ್ತು ಆರ್ ಆ್ಯಂಡ್ ಡಿ ವಲಯದಲ್ಲಿ ನೆದರ್ಲೆಂಡ್‌ನ ನಾನಾ ಕಂಪನಿಗಳು ಹೂಡಿಕೆ ಮಾಡಲು ಆಸಕ್ತಿ ತೋರಿವೆ ಎಂದು ನೆದರ್ಲೆಂಡ್ಸ್ ಕಾನ್ಸುಲ್ ಜನರಲ್ ಇವೋಟ್ ಡಿ ವಿಟ್ಲರ್ ತಿಳಿಸಿದ್ದಾರೆ. ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ್ ಅವರನ್ನು ವಿಧಾನಸೌಧದಲ್ಲಿ ಗುರುವಾರ ಭೇಟಿಯಾಗಿ ಚರ್ಚಿಸಿದ ಬಳಿಕ ಅವರು ಹೀಗೆ ಹೇಳಿದರು.

ಈ ವೇಳೆ ಮಾತನಾಡಿದ ಸಚಿವ ಎಂ.ಬಿ.ಪಾಟೀಲ್, ''ಜಾಗತಿಕ ಹೂಡಿಕೆದಾರರ ಸಮಾವೇಶಕ್ಕೆ ಪೂರ್ವಭಾವಿಯಾಗಿ ಕಳೆದ ಡಿಸೆಂಬರ್‌ನಲ್ಲಿ ಯುರೋಪ್ ರೋಡ್-ಶೋ ನಡೆಸಲಾಗಿತ್ತು. ಆ ಸಂದರ್ಭದಲ್ಲಿ ಎನ್ ಎಕ್ಸ್ ಪಿ ಸೆಮಿ ಕಂಡಕ್ಟರ್ಸ್ ಕಂಪನಿಯು ಮುಂದಿನ 5 ವರ್ಷಗಳಲ್ಲಿ ರಾಜ್ಯದಲ್ಲಿ ಆರ್ ಆ್ಯಂಡ್ ಡಿ ಚಟುವಟಿಕೆಗಳಿಗೆ 1 ಬಿಲಿಯನ್ ಡಾಲರ್ ಹೂಡಿಕೆ ಮಾಡುವ ಆಸಕ್ತಿ ತೋರಿತ್ತು. ಈ ಸಂಬಂಧ ಮುಂದಿನ ದಿನಗಳಲ್ಲಿ ಮತ್ತಷ್ಟು ಅನುಸರಣಾ ಸಭೆಗಳನ್ನು ನಡೆಸಲಾಗು ವುದು,'' ಎಂದು ಮಾಹಿತಿ ನೀಡಿದರು.

ಕೊಂಕಣ ರೈಲ್ವೆ ಕಾರ್ಪೋರೇಷನ್
(ಭಾರತ ಸರ್ಕಾರದ ಒಂದು ಉದ್ಯಮ)

ಟೆಂಡರ್ ಪ್ರಕಟಣೆ

ಕೊಂಕಣ ರೈಲ್ವೆ ಕಾರ್ಪೋರೇಷನ್ ಲಿಮಿಟೆಡ್, ಪ್ರಾದೇಶಿಕ ವಿದ್ಯುತ್ ಅಭಿಯಂತರರು, ಕಾರವಾರ ಇವರು **ireps.gov.in** ಪೋರ್ಟಲ್ ಮೂಲಕ ಮುಕ್ತ ಟೆಂಡರ್ ಆಹ್ವಾನಿಸಿದ್ದಾರೆ. **ಕೆಲಸದ ಹೆಸರು:** ಗೋವಾ ರಾಜ್ಯದ ಮಡಗಾಂವ್‌ನ ಕೊಂಕಣ ರೈಲ್ವೆ ಅಧಿಕಾರಿಗಳ ವಿಶ್ರಾಂತಿ ಗೃಹದ ವಿಸ್ತರಣ / ನವೀಕರಣ. **ಟೆಂಡರ್ ಸಂಖ್ಯೆ:** ಕೆಆರ್-ಕಿಡಬ್ಲ್ಯು-ಓಎಲ್-ಡಬ್ಲ್ಯು-2025-08-ಆರ್‌ಐ. **ಕೆಲಸದ ಮೊತ್ತ ಲಕ್ಷಗಳಲ್ಲಿ:** ₹ 237.95 ಲಕ್ಷಗಳು (ಜಿಎಸ್‌ಟಿ ಹೊರತುಪಡಿಸಿ). **ಬಿಡ್ ಮುಕ್ತಾಯದ ದಿನಾಂಕ & ಸಮಯ: 27.03.2025 ರ 15:00 ಗಂಟೆಗೆ.** ಹೆಚ್ಚಿನ ವಿವರಗಳಿಗೆ ಹಿರಿಯ ಅಭಿಯಂತರರು, ಕಾಮಗಾರಿ, ಕೊಂಕಣ ರೈಲ್ವೆ ಕಾರ್ಪೋರೇಷನ್ ಲಿಮಿಟೆಡ್., ಮಡಗಾಂವ್ ಇವರ ಕಛೇರಿಯನ್ನು ಸಂಪರ್ಕಿಸಿ. ಹೆಚ್ಚಿನ ಮಾಹಿತಿಗಾಗಿ **https://www.ireps.gov.in** ಗೆ ಭೇಟಿ ನೀಡಿ.

ಮಂಗಳೂರು ವಿಶ್ವವಿದ್ಯಾನಿಲಯ

ಸಂಖ್ಯೆ: ಮವಿ/ಶೈಕ್ಷಣಿಕ/ಇ-ಟೆಂಡರ್/ಎ2 ದಿನಾಂಕ: 12.03.2025

ಮಂಗಳೂರು ವಿಶ್ವವಿದ್ಯಾನಿಲಯದ 43ನೇ ವಾರ್ಷಿಕ ಘಟಿಕೋತ್ಸವ ಸಮಾರಂಭಕ್ಕೆ ಭಾಗವಹಿಸುವ ಅತಿಥಿಗಳಿಗೆ ಭೋಜನವನ್ನು ತಯಾರಿಸಿ ವಿತರಿಸುವ ಬಗ್ಗೆ ಮೊಹರು ಮಾಡಿದ ಲಕೋಟೆಯಲ್ಲಿ ದರಪಟ್ಟಿ ಆಹ್ವಾನಿಸಿದ್ದು ಹೆಚ್ಚಿನ ಮಾಹಿತಿಯನ್ನು ವಿಶ್ವವಿದ್ಯಾನಿಲಯದ ಅಧಿಕೃತ ವೆಬ್ ಸೈಟ್ www.mangaloreuniversity.ac.in ನಿಂದ ಪಡೆಯಬಹುದಾಗಿದೆ.

ಸಹಿ/-
ಕುಲಸಚಿವರು

DIPR / MNG / 1593/ MPL /24-25

ಕರ್ನಾಟಕ ಸರಕಾರ
ಕಾರ್ಯನಿರ್ವಾಹಕ ಇಂಜಿನಿಯರವರ ಕಚೇರಿ
ಲೋ.ಇ.ಉಡುಪಿ ವಿಭಾಗ, ಉಡುಪಿ- 576101
ದೂರವಾಣಿ ಮತ್ತು ಫ್ಯಾಕ್ಸ್: 0820-2531802

ನಂ:ಪಿಡಬ್ಲ್ಯುಡಿ:ಯುಡಿಎನ್:ಎನ್‌ಐಟಿ: 40: 2024-25: ಎಇ-2/6676 ದಿ:13-03-2025

ಅಲ್ಪಾವಧಿ ಟೆಂಡರ್ ಪ್ರಕಟಣೆ

2024-25 ನೇ ಸಾಲಿಗೆ ರೂ.4.79 ಲಕ್ಷದಿಂದ 40.35 ಲಕ್ಷದವರೆಗಿನ ರಸ್ತೆ / ಮೋರಿ/ ಕಟ್ಟಡಗಳ ನಿರ್ವಹಣೆ ಯೋಜನೆಯಡಿ ಒಟ್ಟು 9 ಕಾಮಗಾರಿಗಳಿದ್ದು, ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತರಾದ ಕ್ರ.ಸಂ. (7)ಕ್ಕೆ 3ನೇ ದರ್ಜೆ ಮತ್ತು ಉಳಿದ 8 ಕಾಮಗಾರಿಗಳಿಗೆ 4ನೇ ದರ್ಜೆ ಮತ್ತು ಮೇಲ್ಪಟ್ಟ ಅರ್ಹ ಗುತ್ತಿಗೆದಾರರಿಂದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ kppp.karnataka.gov.in ಮುಖಾಂತರ ಟೆಂಡರನ್ನು ಕರ್ನಾಟಕ ಟ್ರಾನ್ಸ್‌ಪರೆನ್ಸಿ ಇನ್ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಆ್ಯಕ್ಟ್-2023 ರಲ್ಲಿ ನಿರೂಪಿತ ಶರ್ತಗೊಳಪಟ್ಟು ಟೆಂಡರನ್ನು ಆಹ್ವಾನಿಸಲಾಗಿದ್ದು, ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ kppp.karnataka.gov.in ಮುಖಾಂತರ ಕಾಮಗಾರಿಯ ಟೆಂಡರ್‌ನಲ್ಲಿ ಭಾಗವಹಿಸಬಹುದಾಗಿದೆ. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 20-03-2025 ರ ಸಂಜೆ 5.30 ರ ವರೆಗೆ. ಹೆಚ್ಚಿನ ಮಾಹಿತಿಗಾಗಿ ಕಚೇರಿಯನ್ನು ಸಂಪರ್ಕಿಸುವುದು.

ಸಹಿ/- ಕಾರ್ಯಪಾಲಕ ಅಭಿಯಂತರರು
ಲೋಕೋಪಯೋಗಿ ಇಲಾಖೆ, ಉಡುಪಿ ವಿಭಾಗ, ಉಡುಪಿ

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ, ಹಾಸನ ವಿಭಾಗ
ಬಿ.ಎಂ. ರಸ್ತೆ, ಹಾಸನ - 573 201.

ನಂ: ಕರಾಸ/ಹಾವಿ/ಸಂಚಾರ/ವಾಣಿಜ್ಯ/3129/2024-25 ದಿನಾಂಕ: 11.03.2025

ಇ-ಟೆಂಡರ್/ಸಂಧಾನ ಪ್ರಕಟಣೆ ಸಂಖ್ಯೆ: 09/2024-25

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ಹಾಸನ ವಿಭಾಗದ ವ್ಯಾಪ್ತಿಗೆ ಬರುವ ವಿವಿಧ ಬಸ್ ನಿಲ್ದಾಣಗಳಲ್ಲಿ ಖಾಲಿಯಿರುವ/ಖಾಲಿಯಾಗಲಿರುವ ಕಟ್ಟಿದ ಸಾಮಾನ್ಯ ಮಳಿಗೆ, ತೆರೆದ ಜಾಗ, ಉಪಹಾರ ಗೃಹಕ್ಕೆ 03, 05, 10 ವರ್ಷಗಳ ಅವಧಿಗೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ **ಇ-ಟೆಂಡರ್/ಸಂಧಾನ ಪ್ರಕಟಣೆ ಸಂಖ್ಯೆ: 09/2024-25**ರಲ್ಲಿ ಟೆಂಡರ್ ಹೊರಡಿಸಿದ್ದು, ಪ್ರಕಟಣೆಯನ್ನು ಇ-ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ "https://kppp.karnataka.gov.in" & ನಿಗಮದ ವೆಬ್‌ಸೈಟ್ ksrtc.karnataka.gov.in ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ಆನ್‌ಲೈನ್ ಮೂಲಕ ದಿ: **03.04.2025 ರಂದು 17.00 ಗಂಟೆಯೊಳಗೆ** ಅರ್ಜಿ ಸಲ್ಲಿಸಲು ಕೊನೆಯ ದಿನಾಂಕವಾಗಿರುತ್ತದೆ. ಅರ್ಜಿದಾರರು ಟೆಂಡರ್ ಅರ್ಜಿ ಶುಲ್ಕ, ಇ.ಎಂ.ಡಿ ಶುಲ್ಕದ ಡಿಡಿ ಹಾಗೂ ಇತರೆ ದಾಖಲಾತಿಗಳನ್ನು **ದಿ: 04.04.2025ರಂದು 17.00 ಗಂಟೆಯೊಳಗೆ** ಮುಚ್ಚಿದ ಲಕೋಟೆಯಲ್ಲಿ ವಿಭಾಗೀಯ ಕಛೇರಿ ಸಂಚಾರ ಶಾಖೆಯಲ್ಲಿ ಇರಿಸಿರುವ ಟೆಂಡರ್ ಬಾಕ್ಸ್‌ನಲ್ಲಿ ಸಲ್ಲಿಸಬಹುದಾಗಿರುತ್ತದೆ. ಟೆಕ್ನಿಕಲ್ ಬಿಡ್ ತೆರೆಯುವ ದಿನಾಂಕ: **05.04.2025 ರಂದು ಬೆಳಗ್ಗೆ 11.30 ಗಂಟೆಗೆ** ನಿಗಧಿಯಾಗಿದ್ದು, ಆರ್ಥಿಕ ಬಿಡ್ ತೆರೆಯುವ ದಿನಾಂಕ: **07.04.2025 ರಂದು ಬೆಳಗ್ಗೆ 11.30 ಗಂಟೆಗೆ** ನಿಗಧಿಯಾಗಿರುತ್ತದೆ. ಅದೇ ರೀತಿ **ಸಂಧಾನ ಪ್ರಕಟಣೆ** ಹೊರಡಿಸಿದ್ದು, ವೈಯಕ್ತಿಕ ಸಂಧಾನ ಅರ್ಜಿ ಪಡೆಯಲು **ದಿ: 03.04.2025ರಂದು 17.00 ಗಂಟೆಗೆ** ಕೊನೆಯ ದಿನಾಂಕವಾಗಿದ್ದು, **ದಿ: 07.04.2025 ರಂದು ಬೆಳಗ್ಗೆ 11.30 ಗಂಟೆಗೆ** ವಿಭಾಗ ಮಟ್ಟದ ಸಂಧಾನವನ್ನು ನಿಗಧಿಪಡಿಸಲಾಗಿದೆ. ಸಂಧಾನದ ಅರ್ಜಿಗಳನ್ನು ವಿಭಾಗೀಯ ಕಛೇರಿಯಲ್ಲಿ ಪಡೆಯಬಹುದಾಗಿದೆ. ಹೆಚ್ಚಿನ ವಿವರಗಳಿಗಾಗಿ ವಿಭಾಗೀಯ ಕಛೇರಿ, ಕ.ರಾ.ರ.ಸಾ.ನಿಗಮ, ಹಾಸನ ವಿಭಾಗ, ಇಲ್ಲಿ ಕಛೇರಿ ಸಮಯದಲ್ಲಿ ಸಂಪರ್ಕಿಸಲು ಕೋರಲಾಗಿದೆ. ದೂರವಾಣಿ ಸಂಖ್ಯೆ: 7760990502.

ಸಹಿ/-
ವಿಭಾಗೀಯ ನಿಯಂತ್ರಣಾಧಿಕಾರಿ
ಕ.ರಾ.ರ.ಸಾ.ನಿಗಮ, ಹಾಸನ ವಿಭಾಗ, ಹಾಸನ

ವಾಸಾಇಕಂ/ಜಾ.ಪ್ರ/5647/2024-25

ನಗರಸಭಾ ಕಾರ್ಯಾಲಯ, ಉಡುಪಿ
ಉಡುಪಿ ಜಿಲ್ಲೆ- 576101. 0820-2520446, 2520306, ಫ್ಯಾಕ್ಸ್: 0820-2524236
Web: www.udupicity.mrc.gov.in Email: itstaff_ulb_udupi@yahoo.com
UCMC/HS/MRF-33TPD/CBT/CR-165/2024-25 Date: 11-03-2025

ವಿಚಾರಣಾ ಕೋಟೇಶನ್ ಪ್ರಕಟಣೆ

ಉಡುಪಿ ನಗರಸಭೆಯ 33 ಟನ್ ಸಾಮರ್ಥ್ಯದ ಮೆಟಿರಿಯಲ್ ರಿಕವರಿ ಫೆಸಿಲಿಟಿ ಘಟಕಕ್ಕೆ ಈ ಕೆಳಕಂಡ ಕನ್ವೇಯರ್ ಬೆಲ್ಟ್‌ಗಳನ್ನು ಹಾಗೂ ಟ್ರಾಮಲ್‌ನ್ನು ಪೂರೈಸಿ ಅಳವಡಿಸಲು ಅಧಿಕೃತ ಸರಬರಾಜುದಾರರಿಂದ ವಿಚಾರಣಾ ಕೊಟೇಶನ್ ಆಹ್ವಾನಿಸಲಾಗಿದೆ. ಪೌರಾಯುಕ್ತರು ಅಥವಾ ಇವರಿಂದ ಅಧಿಕಾರ ಹೊಂದಿದವರು ದಿನಾಂಕ: 19-03-2025ರ ಸಂಜೆ 4.30 ಗಂಟೆಯವರೆಗೆ ಕೊಟೇಶನನ್ನು ಸ್ವೀಕರಿಸಲಿರುವರು. ಸ್ವೀಕೃತವಾಗಿರುವ ಕೊಟೇಶನ್‌ನು ದಿನಾಂಕ: 19-03-2025ರಂದು ಸಂಜೆ 5.00 ಗಂಟೆಗೆ ಅಥವಾ ಸೂಕ್ತ ದಿನದಂದು ತೆರೆಯಲಾಗುವುದು. ಕೊಟೇಶನ್ ದರಗಳನ್ನು ಹಾಗೂ ತಾಂತ್ರಿಕ ವಿವರಗಳನ್ನು ಒಳಗೊಂಡಿರುವ ದರಪಟ್ಟಿಗಳನ್ನು ಟೆಂಡರ್ ಪ್ರಕ್ರಿಯೆ ಕೈಗೊಳ್ಳಲು ಮೂಲದರವಾಗಿ ಪರಿಗಣಿಸಲು ಹಾಗೂ ನಿರ್ದಿಷ್ಟತೆಗಳನ್ನು ನಿರ್ಧರಿಸಲು ಮಾತ್ರ ತೆಗೆದುಕೊಳ್ಳಲಾಗುವುದು. ಅವಧಿ ಮೀರಿ ಬಂದ ದರಪಟ್ಟಿಗಳನ್ನು ಪರಿಗಣಿಸಲಾಗುವುದಿಲ್ಲ. ಹೆಚ್ಚಿನ ವಿವರಗಳಿಗೆ ಕಚೇರಿಯ ಆರೋಗ್ಯ ಶಾಖೆಯನ್ನು ಸಂಪರ್ಕಿಸುವುದು.

S.N.	Proposed Machinery for MRF	No.of Units
1	Transfer conveyor- underground & inclined M type conveyor (50+15)=65 ft	01 No.
2.	Trommel with Feeding and Bottom Conveyor for Dry Waste Screening – 3 Mt/hr	01 No.

ಸಹಿ/- ಪೌರಾಯುಕ್ತರು
ಉಡುಪಿ ನಗರಸಭೆ

ಪುರಸಭಾ ಕಾರ್ಯಾಲಯ, ಕೋನಪ್ಪನ ಅಗ್ರಹಾರ
ಬೆಂಗಳೂರು ದಕ್ಷಿಣ ತಾಲ್ಲೂಕು,
ಬೆಂಗಳೂರು ನಗರ ಜಿಲ್ಲೆ - 560100.
ಇ-ಮೇಲ್: ka.konappanaagrahara.tmc@gmail.com

ಸಂಖ್ಯೆ: ಪುಸ/ಕೋ/ತಾಂ/ಶಾ008/2024-25 ದಿನಾಂಕ: 13-03-2025

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕೋನಪ್ಪನ ಅಗ್ರಹಾರ ಪುರಸಭೆ ವ್ಯಾಪ್ತಿಯಲ್ಲಿ 2024-25 ನೇ ಸಾಲಿನ ಸಾಮಾನ್ಯ ನಿಧಿ ಅಡಿಯಲ್ಲಿ ಕೋನಪ್ಪನ ಅಗ್ರಹಾರ ಪುರಸಭೆ ವ್ಯಾಪ್ತಿಯ ದೊಡ್ಡನಾಗಮಂಗಲ ಮುಖ್ಯರಸ್ತೆಯನ್ನು ಅಭಿವೃದ್ಧಿಪಡಿಸಲು ಅಲ್ಪಾವಧಿ ಟೆಂಡರ್ ಆಹ್ವಾನಿಸಲಾಗಿದೆ. ಸದರಿ ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಛಿಸುವ ಗುತ್ತಿಗೆದಾರರುಗಳು ತಮ್ಮ ಟೆಂಡರ್‌ಗಳನ್ನು ವೆಬ್‌ಸೈಟ್: **https://kppp.karnataka.gov.in** ಮುಖಾಂತರ ಟೆಂಡರ್ ಸಲ್ಲಿಸತಕ್ಕದ್ದು. ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ ಮತ್ತು ಸಮಯ ಈ ಕೆಳಕಂಡಂತಿದೆ.

ಕಾಮಗಾರಿ ಹೆಸರು: **ಕೋನಪ್ಪನ ಅಗ್ರಹಾರ ಪುರಸಭೆ ವ್ಯಾಪ್ತಿಯ ದೊಡ್ಡನಾಗಮಂಗಲ ಮುಖ್ಯರಸ್ತೆ ಅಭಿವೃದ್ಧಿ ಕಾಮಗಾರಿ,** ಇಂಡೆಂಟ್ ಸಂಖ್ಯೆ: **DMA/2024-25/RD/WORK_INDENT36913**, ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): **93.00,** ಟೆಂಡರಿಗಿಟ್ಟ ಮೊತ್ತ (ರೂ. ಲಕ್ಷಗಳಲ್ಲಿ): **75.06,** ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): **150126.00,** ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ ಮತ್ತು ಸಮಯ: **24-03-2025 ರಂದು ಸಂಜೆ 5.00 ಗಂಟೆವರೆಗೆ.** ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ: **25-03-2025 ರಂದು ಸಂಜೆ 5.30 ಗಂಟೆಗೆ.** ಹೆಚ್ಚಿನ ವಿವರಗಳನ್ನು ವೆಬ್‌ಸೈಟ್: **https://kppp.karnataka.gov.in** ಮುಖಾಂತರ ಹಾಗೂ ಕಛೇರಿ ಸಮಯದಲ್ಲಿ ಅಭಿಯಂತರರಿಂದ ಪಡೆಯತಕ್ಕದ್ದು.

ಸಹಿ/- ಮುಖ್ಯಾಧಿಕಾರಿಗಳು, ಪುರಸಭೆ, ಕೋನಪ್ಪನ ಅಗ್ರಹಾರ.
ಸಹಿ/- ಆಡಳಿತಾಧಿಕಾರಿಗಳು, ಪುರಸಭೆ, ಕೋನಪ್ಪನ ಅಗ್ರಹಾರ.

ವಾಸಾಇಕಂ/ಜಾ.ಪ್ರ/5636/ಅಡ್ವಟೈಸ್/2024-25

ಕರ್ನಾಟಕ ಸರಕಾರ
ಆಯುಕ್ತರು ಕಾಗಿನೆಲೆ ಅಭಿವೃದ್ಧಿ ಪ್ರಾಧಿಕಾರ, ಕಾಗಿನೆಲೆ-581110
ಬ್ಯಾಡಗಿ ತಾಲೂಕು, ಹಾವೇರಿ ಜಿಲ್ಲೆ. ಫೋ/ಫ್ಯಾ: 08375-228388
e-mail : commissioner.kda@gmail.com, commissioner.kda@outlook.com
ಕ್ರ.ಸಂ:ಕಾ.ಅ.ಪ್ರಾ/ಕಾಗಿನೆಲೆ/ಟೆಂಡರ್/2024-25/ವಹಿ:138 ದಿ:13-03-2025

ಅಲ್ಪಾವಧಿ ಟೆಂಡರ್ ಪ್ರಕಟಣೆ
(E-GOK KPPP Portal ಮುಖಾಂತರ)

ಈ ಕಛೇರಿಯ ಟೆಂಡರ ಪ್ರಕಟಣೆ ಸಂಖ್ಯೆ ಸಂ:ಕಾಅಪ್ರಾ/ಕಾಗಿನೆಲೆ/ಟೆಂಡರ್/ 2024-25/138 ದಿನಾಂಕ: 13.03.2025ರಲ್ಲಿ ಕಾಗಿನೆಲೆ ಅಭಿವೃದ್ಧಿ ಪ್ರಾಧಿಕಾರದಲ್ಲಿ ಈ ಕೆಳಕಂಡಂತೆ ಟೆಂಡರ್ ಕರೆಯಲಾಗಿದೆ.

ಇ-ಟೆಂಡರ್ ಸಂಖ್ಯೆ: **KDA/2024-25/OW/WORK_INDENT4**

ಕ್ರಸಂ	ಕಾಮಗಾರಿಯ ಹೆಸರು
1.	ಹಾವೇರಿ ಜಿಲ್ಲೆಯ, ಬ್ಯಾಡಗಿ ತಾಲೂಕಿನ ಕಾಗಿನೆಲೆ ಅಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಯ ಕಾಗಿನೆಲೆ, ಇಂಗಳಗೊಂದಿ ಮತ್ತು ಶಿಗ್ಗಾಂವ ತಾಲೂಕಿನ ಬಾಡ ಗ್ರಾಮದಲ್ಲಿನ ಉದ್ಯಾನವನಗಳ ವಾರ್ಷಿಕ ನಿರ್ವಹಣೆ.

ಅರ್ಹತೆ : ದ್ವಿತೀಯ ದರ್ಜೆ ಅಥವಾ ಅದರ ಮೇಲ್ಪಟ್ಟ ದರ್ಜೆ ಗುತ್ತಿಗೆದಾರರು ಮಾತ್ರ

ಟೆಂಡರ್ ವೇಳಾಪಟ್ಟಿ:

1	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ	28.03.2025 ಸಂಜೆ 05-30 ಗಂಟೆಯವರೆಗೆ
2	ತಾಂತ್ರಿಕ ಬಿಡ್ ತೆರೆಯುವ ದಿನಾಂಕ	01-04-2025 ಬೆಳಗ್ಗೆ 11-00 ಗಂಟೆಗೆ
3	ಅರ್ಹ ಟೆಂಡರ್ ಬಿಡ್‌ದಾರರ ಆರ್ಥಿಕ ಬಿಡ್ ತೆರೆಯುವ ದಿನಾಂಕ	02-04-2025 ಬೆಳಗ್ಗೆ 11-30 ಗಂಟೆಗೆ

ಟೆಂಡರನಲ್ಲಿಯ ನಿಬಂಧನೆಗಳು ಹಾಗೂ ಷರತ್ತುಗಳ ವಿವರಗಳನ್ನು E-GOK ಇ-ಪ್ರಕ್ಯೂರಮೆಂಟ್ ಪ್ಲಾಟಫಾರಂ https://kppp.karnataka.gov.in ರಲ್ಲಿ ಪಡೆಯಬಹುದು ಹಾಗೂ ಆಯುಕ್ತರ ಕಚೇರಿಯಲ್ಲಿ ಹೆಚ್ಚಿನ ಮಾಹಿತಿಯನ್ನು ಪಡೆಯಬಹುದು. (ದೂರವಾಣಿ: 08375-228388).

ಮೊಬೈಲ್ ಸಂಖ್ಯೆ: 7892850603.

ಸಹಿ/- ಆಯುಕ್ತರು, ಕಾಗಿನೆಲೆ ಅಭಿವೃದ್ಧಿ ಪ್ರಾಧಿಕಾರ ಕಾಗಿನೆಲೆ, ಹಾವೇರಿ ಜಿಲ್ಲೆ.

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ

ಟೆಂಡರ್‌ಗಾಗಿ ಆಹ್ವಾನ (ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

ಬೆಂಗಳೂರು ಜಲಮಂಡಳಿಯು ಕೆಳಕಂಡ ಕಾಮಗಾರಿಗಳಿಗಾಗಿ ನೋಂದಾಯಿತ ಏಜೆನ್ಸಿಗಳಿಂದ ಟೆಂಡರ್‌ಗಳನ್ನು ಆಹ್ವಾನಿಸಿದೆ.

ಮುಖ್ಯ ಅಭಿಯಂತರರ ಕಛೇರಿ (ದಕ್ಷಿಣ), 7ನೇ ಮಹಡಿ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು - 560009.

ಕ್ರ. ಸಂ.	ವಿಭಾಗ	ಐಎಫ್‌ಟಿ ಸಂಖ್ಯೆ	ಕ್ರ. ಸಂ.	ಟೆಂಡರ್‌ಗಿಟ್ಟ ಮೊತ್ತ / ಇ.ಎಂ.ಡಿ ಮೊತ್ತ (ರೂ. ಗಳಲ್ಲಿ)	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ	ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ
1	(ದಕ್ಷಿಣ-2)	ಬೆಂಜಮಂ/ಕಾನಿಅ(ದ-2)/ಪಿಬಿ/2479/2024-25 ದಿನಾಂಕ: 05-03-2025	1	ರೂ. 3,24,959/- / ರೂ. 8,200/-	21-03-2025 ರ ಸಂಜೆ 4.00 ಗಂಟೆಯವರೆಗೆ	25-03-2025 ರ ಸಂಜೆ 4.30 ಗಂಟೆಯ ನಂತರ
		ಬೆಂಜಮಂ/ಕಾನಿಅ(ದ-2)/ತಾಂಅ/ಪಿಬಿ/2481/2024-25 ದಿನಾಂಕ: 05-03-2025	2	ರೂ. 77,57,326/- / ರೂ. 1,55,147/-	21-03-2025 ರ ಸಂಜೆ 4.00 ಗಂಟೆಯವರೆಗೆ	25-03-2025 ರ ಸಂಜೆ 4.00 ಗಂಟೆಯ ನಂತರ
		ಬೆಂಜಮಂ/ಕಾನಿಅ(ದ-2)/ತಾಂಅ/ಪಿಬಿ/2483/2024-25 ದಿನಾಂಕ: 05-03-2025	3	ರೂ. 75,84,395/- / ರೂ. 1,51,688/-		

ಸಹಿ/- ಕಾರ್ಯನಿರ್ವಾಹಕ ಅಭಿಯಂತರರು (ದಕ್ಷಿಣ-2)

ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸುವ ಕುರಿತು ಮಾಹಿತಿಯನ್ನು ವೆಬ್‌ಸೈಟ್: https://kppp.karnataka.gov.in. ಗೆ ಲಾಗಿನ್ ಆಗಿ ಪಡೆಯಬಹುದು. ಹೆಚ್ಚಿನ ವಿವರಗಳಿಗಾಗಿ ಮೇಲಿನ ಸಹಿದಾರರ ಕಛೇರಿಯನ್ನು ಕೆಲಸದ ವೇಳೆಯಲ್ಲಿ ಸಂಪರ್ಕಿಸಬಹುದು.

ವಾಸಾಇಕಂ/ಜಾ.ಪ್ರ/ಅಡ್ವಟೈಸ್/5641/2024-25

ಇ-ಹರಾಜು ಮಾರಾಟ ಸೂಚನೆ
ಬ್ಲೂವಾಟರ್ ಫುಡ್ಸ್ ಮತ್ತು ಎಕ್ಸ್‌ಪೋರ್ಟ್ ಪ್ರೈವೇಟ್ ಲಿಮಿಟೆಡ್
(CIN: U51223KA1997PTC021995)

ಇನ್‌ಸಾಲ್ವೆನ್ಸಿ ಮತ್ತು ಬ್ಯಾಂಕ್‌ರಪ್ಸಿ ಕೋಡ್, 2016ರ ಅಡಿ ಸ್ವತ್ತುಗಳ ಮಾರಾಟ

ಬೆಂಗಳೂರಿನ ಗೌರವಾನ್ವಿತ ರಾಷ್ಟ್ರೀಯ ಕಂಪನಿ ಕಾನೂನು ನ್ಯಾಯಮಂಡಳಿಯು ಫೆಬ್ರವರಿ 25, 2021ರ ತನ್ನ ಆದೇಶದಂತೆ, ಬ್ಲೂವಾಟರ್ ಫುಡ್ಸ್ ಮತ್ತು ಎಕ್ಸ್‌ಪೋರ್ಟ್ ಪ್ರೈವೇಟ್ ಲಿಮಿಟೆಡ್ ವಿರುದ್ಧ ಲಿಕ್ವಿಡೇಷನ್ ಪ್ರಕ್ರಿಯೆ ಆರಂಭಿಸಲಾಗಿದೆ. "ಎಲ್ಲಿ ಹೇಗಿದೆಯೋ", "ಏನಿದೆಯೋ ಹಾಗೆ", "ಹಾಗಿನ ಆಧಾರದಲ್ಲಿ" ಮತ್ತು "ಯಾವುದೇ ಆಶ್ರಯವಿಲ್ಲದೆ" ಇನ್‌ಸಾಲ್ವೆನ್ಸಿ ಮತ್ತು ಬ್ಯಾಂಕ್‌ರಪ್ಸಿ ಕೋಡ್, 2016ರ ಅಡಿ ಮಾರಾಟ ನಡೆಯಲಿದೆ.

ಮಾರಾಟವು ಇ-ಹರಾಜು ಪ್ಲಾಟ್‌ಫಾರಂ ಇ-ಪ್ರೊಕ್ಯೂರ್‌ಮೆಂಟ್ ಟೆಕ್ನಾಲಜೀಸ್ ಲಿ.-"ಆಕ್ಷನ್ ಟೈಗರ್" https://ncltauction.auctiontiger.net ಮೂಲಕ ನಡೆಯಲಿದೆ.

ಸ್ವತ್ತುಗಳ ವಿವರ	ಮೀಸಲು ಬೆಲೆ (ರೂ.) ಲಕ್ಷಗಳಲ್ಲಿ	ಇಎಂಡಿ ಮೊತ್ತ (ರೂ.) ಲಕ್ಷಗಳಲ್ಲಿ
ಕಾರ್ಪೊರೇಟ್ ಸಾಲಗಾರನ ಆಸ್ತಿಗಳ ಮಾರಾಟ ಇ-ಹರಾಜಿನ ದಿನಾಂಕ ಮತ್ತು ಸಮಯ: 18ನೇ ಏಪ್ರಿಲ್ 2025, ಬೆಳಗ್ಗೆ 11.00 ರಿಂದ ಮಧ್ಯಾಹ್ನ 02.00 ಗಂಟೆ		
ಸರ್ವೆ ನಂ. 96-2, 96-3ಬಿ2, 141-2ಬಿ2, 5 ಎಕರೆ 85 ಸೆಂಟ್ಸ್‌ನಷ್ಟು ಜಮೀನು, ಬೆಳಪು ಗ್ರಾಮ ಪಂಚಾಯತ್, ಉಡುಪಿ ತಾಲೂಕು, ಉಡುಪಿ ಜಿಲ್ಲೆ, ಕರ್ನಾಟಕ ಇಲ್ಲಿದೆ.	539	53.9
ಸರ್ವೆ ನಂ. 10-10, 10-9ಬಿ, 10-8ಎ (10-8ಬಿ2), 10-9ಎ, 3 ಎಕರೆ 3.25 ಸೆಂಟ್ಸ್‌ನಷ್ಟು ಜಮೀನು, ಸಸಿಹಿತ್ಲು ಗ್ರಾಮ, ಮಂಗಳೂರು ತಾಲೂಕು, ದಕ್ಷಿಣ ಕನ್ನಡ ಜಿಲ್ಲೆ, ಕರ್ನಾಟಕ ಇಲ್ಲಿದೆ.	278	27.9

ಸೂಚನೆ:
1. ಈ ಮಾರಾಟ ಪ್ರಕಟಣೆಯನ್ನು https://ncltauction.auctiontiger.net / https://www.ibbi.gov.in/liquidation-auction-notices/lists ನಲ್ಲಿ ಲಭ್ಯವಿರುವ ಇ-ಹರಾಜು ಬಿಡ್ ಅರ್ಜಿ ಹಾಗೂ ಇ-ಹರಾಜು ಬಗ್ಗೆ ಇತ್ಯಾದಿ ವಿವರಗಳನ್ನು ಒಳಗೊಂಡಿರುವ ಸಂಪೂರ್ಣ ಇ-ಹರಾಜು ಪ್ರಕ್ರಿಯೆಯ ದಾಖಲೆಯೊಂದಿಗೆ ಓದತಕ್ಕದ್ದು. ಅಥವಾ ನಿರೀಕ್ಷಿತ ಬಿಡ್‌ದಾರರು ಲಿಕ್ವಿಡೇಟರ್‌ರವರನ್ನು ಇ-ಮೇಲ್: ip.shivadutth@gmail.com ಅಥವಾ ಮೆ. ಇ-ಪ್ರೊಕ್ಯೂರ್‌ಮೆಂಟ್ ಟೆಕ್ನಾಲಜೀಸ್ ಲಿ. - ಶ್ರೀ ಪ್ರವೀಣ್ ತೇವರ್ praveen.thevar@auctiontiger.net/ nclt@auctiontiger.net ದೂರವಾಣಿ 91+ 9722778828 ರವರನ್ನು ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಬಹುದು.
2. ಲಿಕ್ವಿಡೇಟರ್‌ರವರು ಬಿಡ್‌ಗಳನ್ನು ಸ್ವೀಕರಿಸುವ, ತಿರಸ್ಕರಿಸುವ ಅಥವಾ ಇ-ಹರಾಜಿನ ನಿಯಮ ಮತ್ತು ನಿಬಂಧನೆಗಳನ್ನು ಮಾರ್ಪಾಡು ಮಾಡುವ ಅಧಿಕಾರವನ್ನು ಹೊಂದಿರುತ್ತಾರೆ ಅಥವಾ ಲಿಕ್ವಿಡೇಟರ್‌ರವರು ಇ-ಹರಾಜನ್ನು ರದ್ದುಗೊಳಿಸುವ ಅಥವಾ ಇ-ಹರಾಜಿನ ಯಾವುದೇ ಐಟಂನ್ನು ಯಾವುದೇ ಸಮಯದಲ್ಲಿ ರದ್ದುಗೊಳಿಸಬಹುದು. ಯಾವುದೇ ಕಾರಣ ನೀಡದೆ ಯಾವುದೇ ಬಿಡ್‌ಗಳನ್ನು ತಿರಸ್ಕರಿಸುವ ಹಕ್ಕು ಅವರಿಗಿರುತ್ತದೆ.
3. ಕಾರ್ಪೊರೇಟ್ ಸಾಲಗಾರರ ಮೌಲ್ಯಕ್ಕೆ ಅತೀ ಹೆಚ್ಚು ಮೌಲ್ಯ ಪಡೆಯುವ ಸಲುವಾಗಿ ಬಿಡ್ಡು ಮಾಡಿದ ಬಿಡ್ಡುದಾರರಿಂದ ಲಿಕ್ವಿಡೇಟರ್‌ರವರು ಸ್ವೀಕರಿಸಿದ ಬಿಡ್‌ಗಳ ನಡುವೆ ಯಶಸ್ವಿ ಬಿಡ್‌ದಾರರನ್ನು ಘೋಷಿಸುವ ಅಧಿಕಾರ ಅವರಿಗಿರುತ್ತದೆ.
4. ಆಸಕ್ತ ಬಿಡ್‌ದಾರರು ಅರ್ಹತಾ ದಾಖಲೆಗಳನ್ನು **28ನೇ ಮಾರ್ಚ್ 2025** ರಂದು ಅಥವಾ ಮೊದಲು ಸಲ್ಲಿಸಲು ವಿನಂತಿಸಲಾಗಿದೆ ಮತ್ತು ಅರ್ಹ ಬಿಡ್‌ದಾರರನ್ನು **4ನೇ ಏಪ್ರಿಲ್ 2025** ರಂದು ಘೋಷಿಸಲಾಗುತ್ತದೆ. ಇ-ಹರಾಜು ಪ್ರಕ್ರಿಯೆಯಲ್ಲಿ ಭಾಗವಹಿಸುವಿಕೆಯು ಇಎಂಡಿ ಮೊತ್ತದ ಪಾವತಿಗೆ ಒಳಪಟ್ಟಿರುತ್ತದೆ ಮತ್ತು ಲಿಕ್ವಿಡೇಟರ್‌ರವರ ಪರಿಶೀಲನೆಗೆ ಒಳಪಟ್ಟಿರುತ್ತದೆ.
5. ಆಸಕ್ತ ಬಿಡ್ಡುದಾರರು ಇಎಂಡಿಯೊಂದಿಗೆ ತಮ್ಮ ಅರ್ಜಿಗಳನ್ನು ಲಿಕ್ವಿಡೇಟರ್‌ರವರ ಕಚೇರಿಗೆ ಇ-ಮೇಲ್ ip.shivadutth@gmail.com ಗೆ ದಿನಾಂಕ: 16ನೇ ಏಪ್ರಿಲ್, 2025 ಅಥವಾ ಅದಕ್ಕಿಂತ ಮುಂಚಿತವಾಗಿ ಸಂಜೆ 5.00 ಗಂಟೆಯ ಒಳಗಾಗಿ ಕಳುಹಿಸಬಹುದಾಗಿದೆ.

ಸಹಿ/- ಶಿವದತ್ ಬನ್ನಂಜೆ
ಲಿಕ್ವಿಡೇಟರ್
ಬ್ಲೂವಾಟರ್ ಫುಡ್ಸ್ ಮತ್ತು ಎಕ್ಸ್‌ಪೋರ್ಟ್ ಪ್ರೈವೇಟ್ ಲಿಮಿಟೆಡ್
ನೊ. ನಂ.: IBBI/IPA-002/IP-N00268/2017-2018/10779
ಇ-ಮೇಲ್: ip.shivadutth@gmail.com; ಮೊಬೈಲ್: +91 9845286251

ದಿನಾಂಕ: 13.03.2025
ಸ್ಥಳ: ಬೆಂಗಳೂರು

Bennett & Coleman
THE TIMES OF INDIA

TENDER FOR SALE OF Waste Newsprint, Waste Aluminum Plates, E-Waste, Damage NPT and Miscellaneous Waste

Sealed Tenders are invited for sale of Newsprint related waste on full truck load basis, Aluminum Plate waste on monthly basis, Production related scrap, miscellaneous and E-waste scrap items (as and when it is required to dispose) and damaged Newsprint (if any) etc. for the period **May'25 to Aug'25 on "As is where is basis"**, available from our presses or any other warehouses at Bangalore, Hubli, Mangalore, Mysore, Bagalkot, Gangavathi, Shivamogga, Gulbarga and Belgaum.

List of Materials can be availed and inspected in co-ordination with the following people till **28th Mar'25** (except Saturday, Sunday and public holidays) between 9.30am to 5.00pm only.

For BCCL-Bangalore, Hubli, Mangalore and Mysore,
Mr. Sushil Kumar Dash @ 9938234561, Email- sushil.dash@timesofindia.com
For MMCL- all locations, Mr. Shivakumar-7676454575 and Mr. Gangadhar Desai-9343382559.

Interested Parties may contact the above-mentioned people and submit the tenders along with separate EMDs for **BENNETT COLEMAN AND CO. LTD. and Metropolitan Media Company Ltd.** in the form of **DD/Pay order drawn on company's full name (for which tenders are being submitted) @ 5% of the monthly sale value or Rs.1lac whichever is lower.** The DD along with the filed up tender forms should be submitted in a sealed cover super-scribed "QUOTATION FOR WASTE ITEMS" and reach us latest by **5.00pm on 28th Mar'25** at the following address : (1) **for Bennett Coleman and Co. Ltd.** – The Times of India Press, Business & Commercial Dept., 9/10/11A, Bommasandra Industrial Area, 4th Cross, Bommasandra, Bangalore-560099 and (2) **for Metropolitan Media Company Ltd.** (Vijay Karnataka) – Business & Commercial Dept., Sanjana Plaza 74/2, 4th & 5th Floor, Elephant Rock Rd., Jayanagar 3rd block, Bengaluru-560011.

The supply against this tender will commence from 1st May'2025 onwards. The company reserves the rights to reject any or all tenders without assigning any reason thereof.

SD/-